## 37

# ತಿರಸ್ಕಾರ ಸಹಿಸುವದು

## ಲೂಕ 4:16-31, ಒಂದು ನಿಕಟ ನೋಟ

ಹಳೆ ಒಡಂಬಡಿಕೆಯ ಪ್ರವಾದನೆಗಳು ಮೆಸ್ಸೀಯನ ಪ್ರಭಾವ, ಶಕ್ತಿ, ಮತ್ತು ಆತನು ಮಾಡಲ್ಲಿದ್ದ ಆಶ್ಚರ್ಯ ಸಂಗತಿಗಳು ಕುರಿತು ತಿಳಿಸಿದವು. ಈ ಪ್ರವಾದನ ಸಂಗತಿಗಳ ನಡುವೆ ಒಂದು ವಿಶೇಷ ಕಾರ್ಯವು ಜರುಗಿತು: ಯೆಶಾಯ 53:3ರಲ್ಲಿ, "ಅವನು ದಿಕ್ಕರಿಸಲ್ಪಟ್ಟವನು ಮನುಷ್ಯರು ಸೇರಿಸಿಕೊಳ್ಳುದನು" KJVಯಲ್ಲಿ "ಅವನು ಮನುಷ್ಯರಿಂದ ತಿರಸ್ಕರಿಸಲ್ಪಟ್ಟವನು" ಎಂದಿದೆ. "ತಿರಸ್ಕಾರ" ಎಂಬುದೇ ಮೆಸ್ಸೀಯನ ಕುರಿತ ಪ್ರವಾದನೆ ಯಾಗಿದೆ.

ಯೇಸು ಕ್ರಿಸ್ತನು ತಾನೇ ತನ್ನ "ತಿರಸ್ಕೃತದ" ಬಗ್ಗೆ ಮಾತಾಡಿರುವನು. ತನ್ನ ಶಿಷ್ಯರನ್ನು ತನ್ನ ಉದ್ದೇಶಕ್ಕಾಗಿ ಸಿದ್ಧಪಡಿಸುವಾಗ, ಆತನು ಬಹಳ ಕಷ್ಟಗಳನ್ನುನುಭವಿಸಿ ಹಿರಿಯರಿಂದಲೂ, ಮಹಾಯಾಜಕರಿಂಲೂ ಶಾಸ್ತ್ರಿಗಳಿಂದಲೂ ನಿರಾಕೃತನಾಗಬೇಕು (ಮಾರ್ಕ 8:31) ಎಂದು ಹೇಳಿದನು. ಆತನು ಬಹು ಕಷ್ಟಗಳನ್ನನುಭವಿಸಿ, ಈಗಿನ ಕಾಲದ ಜನರಿಂದ ನಿರಾಕರಿ ಸಲ್ಪಡಬೇಕು (ಲೂಕ 17:25).

ತಿರಸ್ಕೃತಗಂಡ ದೇವ ಸೇವಕರುಗಳಲ್ಲಿ, ಯೇಸು ಮೊದಲಿಗನಲ್ಲ, ಪ್ರವಾದಿಗಳಾದ ಯೆರೆಮೀಯ ಹಾಗೂ ಯೆಹೆಜ್ಕೇಲರು ವಾಕ್ಯ ಸಾರಲು ಆದೇಶ ಹೊಂದಿದ್ದರೂ, ಜನರು ಅವರನ್ನು ಹಾಗೂ ಅವರ ಸಂದೇಶವನ್ನು ನಿರಾಕರಿಸುವರು ಎಂದು ಹೇಳಲ್ಪಟ್ಟಿತು. ಈ ಹಿಂಸೆಯನ್ನು ಅವರು ಅನುಭವಿಸಿರು. "ದೇವರು ನನ್ನ ಕುರಿತಾದ ತನ್ನ ಆ ದೇಶವನ್ನು ರದ್ದುಗೊಳಿಸಿದರೆ" ಒಳಿತು ಎಂದು ಆಗಾಗ್ಗೆ ಯೆರೆಮೀಯನು ಹೇಳಿರುವನು.[1]

ಸಕಲ ವಿಷಯಗಳಲ್ಲಿ "ನಿರಾಕರಣೆ" ಎಂಬುದನ್ನು ನಾವುಗಳು ಇಚ್ಚಿಸುವದಿಲ್ಲ. ನಮ್ಮ ಪಟ್ಟಿಯಲ್ಲಿ ಅದು ಪ್ರಥಮ ಸ್ಥಾನ ಹೊಂದಿರುತ್ತದೆ.[2] ನಾನು ಬಾಲಕನಾಗಿರುವಾಗ ಹೆಚ್ಚು ಬಹುಮಾನಗಳನ್ನು ಪಡೆಯಲು, ನನ್ನ ಕಾರ್ಖಾನೆಯು ನೀಡಿದ ವಸ್ತುಗಳನ್ನು ಹೆಚ್ಚಾಚ್ಚಾಗಿ ಮಾರಾಟ ಮಾಡುತ್ತಿದ್ದೆನು. ನಾನು ಬೀಜಗಳನ್ನು ವಂದನೆ ಪತ್ರಗಳನ್ನು ಹಾಗೂ ಮನೆಯನ್ನು ಕ್ರಮವಾಗಿ ಇಡುವ ಮಾಹಿತಿವುಳ್ಳ ವಾರ ಪತ್ರಿಕೆಗಳನ್ನು ಮಾರಾಟ ಮಾಡುತ್ತಿದ್ದೆನು. ಅದನ್ನು ಮಾರಾಟಮಾಡುವಾಗ ಜನರು - "ಬೇಡ" ಎಂದು ಹೇಳಿದರೆ ಅದು ಅತಿ ಬೇಸರದ ವಿಚಾರ ವಾಗಿತ್ತು. ಆಗ ನಾನು ಮೆಲುಧ್ವನಿಯಲ್ಲಿ, ಇದು ನಿಮಗೆ ಅಗತ್ಯವಿಲ್ಲವೆಂದು ಭಾವಿಸುತ್ತೇನೆ, ಅಲ್ಲವೇ? ಎಂದು ಹೇಳುತ್ತಿದ್ದೆನು. ತಿರಸ್ಕಾರವನ್ನು ನಾನು ದ್ವೇಷಿಸುತ್ತೇನೆ.

ನಾನು ಮೂವತ್ತು ಅಥವಾ ನಲವತ್ತು ವಯಸ್ಸಿನವನಾಗಿದ್ದರೆ, ಸಹಿಸುತ್ತಿದ್ದೆನು, ಆದರೆ ಯೌವನಸ್ಥನಾಗಿದ್ದು ಸಹಿಸಲು ಆಗುತ್ತಿರಲಿಲ್ಲ. ಏಕೆಂದರೆ "ಪ್ರೀತಿ ಮಾಡಲು" ಯೌವನಸ್ಥನು ಯೌವನಸ್ಥೆಯನ್ನೇ "ಕೇಳಬೇಕಲ್ಲವೇ ... ಅದು ತಿರಸ್ಕಾರಕ್ಕೆ" ಉದಾಹರಣೆಯಾಗಿದೆ ನನಗೆ ನೆನಪಿರುವಂತೆ, ಒಬ್ಬ ಯೌವನಸ್ಥೆಗೆ, ನನ್ನೊಂದಿಗೆ ಊಟಮಾಡಲು ಕೇಳಿದಾಗ "ಆಕೆ" "ಇಲ್ಲ"ವೆಂದು ತಿರಸ್ಕರಿಸಿದಳು.

ಟ್ರೂಥ್ ಫಾರ್ ಟುಡೇಗೆ, ಕೆಲವು ಸ್ವತಂತ್ರ ಬರವಣಿಗೆಯನ್ನು ನಾನು ಬರೆಯುತ್ತೇನೆ, ಅದು ತಿರಸ್ಕೃತದ ಬರಹ - ಯಾವ ಅರ್ಥವನ್ನು ನೀಡಿದ ಆ ಪತ್ರಗಳಿಗೆ, ಅದರಲ್ಲಿ ನನಗೆ ಆಸಕ್ತಿ ಇಲ್ಲವೆನ್ನುತ್ತೇನೆ. "ಹೌದು ತಿರಸ್ಕಾರ"ವನ್ನು ನಾವು ದ್ವೇಷಿಸುತ್ತೇವೆ.

ನೀವು ಸಹ ತಿರಸ್ಕಾರವನ್ನು ಸಹಿಸುವದಿಲ್ಲ ಎಂದು ನಾನು ಭಾವಿಸುತ್ತೇನೆ. ಮಾರಾಟದ

ಕೆಲಸವಿರಬಹುದು ಅಥವಾ ಕೆಲಸಕ್ಕೆ ಸೇರುವ ಕಾರ್ಯವಿರಬಹುದು, ಅಥವಾ ಅತ್ತೆ ಮಾವನ ಸಂಬಂಧದಲ್ಲಿರಬಹುದು, ಇದರಲ್ಲಾಗುವ "ತಿರಸ್ಕಾರ"ವನ್ನು ನಾವುಗಳು ಸಹಿಸಲುಅಸಾಧ್ಯ. ತಂದೆ ತಾಯಿಗಳಿಂದ ಸಹಪಾಟಿಯಿಂದ ಅಥವಾ ಮಕ್ಕಳಿಂದ ಉಂಟಾಗದು "ತಿರಸ್ಕಾರ" ಅನುಭವದ ವೇದನೆವುಳ್ಳ ದಾಗಿರುತ್ತದೆಯಲ್ಲವೇ?

ಲೂಕ 4:16-31ರಲ್ಲಿ ನಜರೇತಿನವರು ಯೇಸುವನ್ನು ತಿರಸ್ಕಾರ ಮಾಡಿದ ಚಿತ್ರಣವನ್ನು ಕಾಣುತ್ತೇವೆ. ಅದು ಆತನ ವಾಸಸ್ಥಳವಾಗಿತ್ತು. 1955ರಲ್ಲಿ ಓಕ್ಲ ಹಮದ ಲೋನ್ ವುಲ್ಫ್‌ನಲ್ಲಿ ನಾನು ಮೊದಲ ಸುವಾರ್ತೆಯನ್ನು ಸಾರಿದೆನು. ನಾನು ಬೆಳೆ ಯುತ್ತಿರುವಾಗ, ಆ ಸ್ಥಳದಲ್ಲೆಲ್ಲಾ ಓಡಾಡುತ್ತಿದ್ದೆನು. ಲೋನ್‌ವುಲ್‌ನಲ್ಲಿ ಐದು ವರ್ಷಗಳ ಕಾಲ ಪ್ರಾಥಮಿಕ ಶಾಲೆಗೆ ಹೋದೆನು. ಅದು ನನ್ನ ಮನೆಯಿದ್ದ ಸ್ಥಳವಾಗಿತ್ತು. ಲೋನ್‌ವುಲ್ಫ್‌ನಲ್ಲಿ ನನ್ನ ಪ್ರಾಥಮಿಕ ಸುವಾರ್ತಾ ಸೇವೆಯು ಕಷ್ಟಕರವಾಗಿತ್ತು. ಆದರೆ ಅಲ್ಲಿನ ಕ್ರೈಸ್ತರು ಪ್ರೋತ್ಸಾಹದಾಯಕವಾಗಿದ್ದರು - ಆದರೆ ಅವರು ನನ್ನನ್ನು ತಿರಸ್ಕರಿಸಿದ್ದರೆ? ಒಂದು ವೇಳೆ ಈ ದಿನ ನಾನು ಪ್ರಸಂಗಿಯಾಗಿರುತ್ತಿರಲಿಲ್ಲ. ಯೇಸು ಪ್ರಸಂಗಿಸಲು ತನ್ನ ಊರಿಗೆ ಹೋದಾಗ, ತಿರಸ್ಕೃತನಾದನು. ನಜರೇತಿನವರ ತಿರಸ್ಕಾರವು, ಮುಂದೆ ಯೆಹೂದ್ಯರಿಂದ ಆಗುವದಕ್ಕಿದ್ದ ತಿರಸ್ಕಾರದ ಸೂಚನೆಯಾಗಿತ್ತು.

ಯೇಸು ತಿರಸ್ಕಾರಕ್ಕೊಳಗಾದ ಸಂಗತಿಗಳನ್ನು ಮೂರು ಸುವಾರ್ತೆಗಳಲ್ಲೂ ದಾಖಲು ಮಾಡಲಾಗಿದೆ.[3] ಲೂಕ ದಾಖಲೆಗಳ ಪ್ರಕಾರ ಸಾಕಷ್ಟು ವಿಚಾರಗಳನ್ನು ನಾನು ತಿಳಿಸಲು ಬಯಸುತ್ತೇನೆ. ಮೊದಲು ಆ ಕಥೆಯನ್ನು ತಿಳಿದು, ಯಾವ ಪಾಠವನ್ನು ಕಲಿಯಬಹುದೆಂದು ಗಮನಿಸೋಣ. ನಂತರ ಒಂದು ನಿಖರವಾದ ಪ್ರಶ್ನೆಯನ್ನು ನಾನು ಕೇಳುತ್ತೇನೆ: ಈ ತಿರಸ್ಕಾರವನ್ನು ಸ್ವೀಕರಿಸಿ, ಯೇಸು ಮುಂದುವರೆಯಲು ಹೇಗೆ ಸಾಧ್ಯವಾಯಿತು?

## ಯೇಸು ಹೊಂದಿದ ತಿರಸ್ಕಾರ

ಹೀಗಿರಲಾಗಿ ಆತನು ತಾನು ಬೆಳೆದ ನಜರೇತಿಗೆ ಬಂದನು (ವಚನ 16ಎ). ನಜರೇತು ಯೇಸು ಬೆಳೆದು ಒಂದ ಚಿಕ್ಕ ಪಟ್ಟಣವಾಗಿತ್ತು. ಆತನು ಪ್ರತಿಸಬ್ಬತ್ತಿನಲ್ಲಿ ಸಭಾಮಂದಿರಕ್ಕೆ ಹೋಗುವದು ವಾಡಿಕೆಯಾಗಿತ್ತು.[4] ನ್ಯೂ ಸೆಂಚುರಿ ಬೈಬಲ್ ಪ್ರಕಾರ, ಆತನು ಯಥಾಪ್ರಕಾರ ಸಭಾಮಂದಿರಕ್ಕೆ ಹೋದನು. ಆರಾಧನೆಗೆ ಹೋಗುವದು ಕೇವಲ ಅಭ್ಯಾಸವಲ್ಲ, ಅದು ಒಳ್ಳೆಯ ಅಭ್ಯಾಸವಾಗಿದೆ.

ನಂತರದಲ್ಲಿ ಬರೆಯಲಾದ ರಬ್ಬೀಯರ ಬರವಣಿಗೆಯ ಮುಖಾಂತರ, ಸಭಾಮಂದಿರದ ಆರಾಧನೆಯ ಬಗ್ಗ ಅರಿಯುತ್ತೇವೆ ಶೇಮ (ಧರ್ಮೋಪದೇಶಕಾಂಡ 6:4-9).[5] ಗ್ರಂಥವನ್ನು ಪಠಣ ಮಾಡುವದರಿಂದ ಆರಾಧನೆಯು ಆರಂಭವಾಗುತ್ತಿತ್ತು. ಕೆಲವು ಪ್ರಾರ್ಥನೆಗಳ ನಂತರ, ಧರ್ಮಶಾಸ್ತ್ರದ ಒಂದು ಭಾಗವನ್ನು ಓದುತ್ತಿದ್ದರು. ನಂತರ ಪ್ರವಾದನಾ ವಾಕ್ಯವನ್ನು ಓದುತ್ತಿದ್ದರು ಯೇಸು ಸ್ವಯಂ ಇಚ್ಛೆಯಿಂದ ಅಥವಾ ಆತನಿಗೆ ಆ ಭಾಗವನ್ನು ಓದಲು ಹೇಳಲಾಗುತ್ತಿತ್ತು.

"ಆತನು ಓದುವದಕ್ಕಾಗಿ ಎದ್ದು ನಿಂತನ" ಆಗ ಯೆಶಾಯನೆಂಬ ಪ್ರವಾದಿಯ ಗ್ರಂಥದ ಸುರುಳಿಯನ್ನು ಆತನ ಕೈಗೆ ಕೊಡಲಾಗಿ (ವಚನಗಳು 16ಸಿ, 17ಎ). ಅದನ್ನು ಸಭಾಮಂದಿರದ ಆಳು ಆತನಿಗೆ ನೀಡಿದನು (ವಚನ 20). KJVಯಲ್ಲಿ, "ಸೇವಕನು" ನ್ಯೂ ಸಂಚುರಿ ವರ್ಶನ್‌ನಲ್ಲಿ "ಸಹಾಯಕನು"[6] ಆಳು ಗ್ರಂಥಗಳನ್ನು ಜೋಪಾನವಾಗಿ ಇಡಬೇಕಿತ್ತು. ಅವನಿಗೆ ಸಂಬಂಳವು ದೊರಕುತ್ತಿತ್ತು.[7] ಅವರು ಸಬ್ಬತ್ ಶಾಲೆ ಹಾಗೂ ಸೇವೆಯಲ್ಲಿ ಸಹಾಯಕರಾಗಿ ರುತ್ತಿದ್ದರು. ನಮ್ಮ ಸಭಾ "ಮೇಲ್ವಿಚಾರಕ"ರಂತಿದ್ದರು.

ಆ ಆಳು ಯೆಶಾಯನ ಸುರುಳಿಯನ್ನು "ಮಂಜೂಷ" ಎಂಬ ಪೆಟ್ಟಿಗೆಯಿಂದ ತೆಗೆದುಕೊಟ್ಟನು. ಅವುಗಳು ದೊಡ್ಡ ಸುರುಳಿಯಾಗಿದ್ದು; ಅದರ ಉದ್ದ ಮೂರು ಅಡಿಗಿಂತ ಅಧಿಕವಾಗಿತ್ತು ಯೆಶಾಯ ಗ್ರಂಥವು ದೊಡ್ಡದಾದ್ದರಿಂದ, ಪ್ರತ್ಯೇಕವಾದ ಸುರುಳಿಯಾಗಿತ್ತು.

ಆತನು ಆ ಸುರುಳಿಯನ್ನು ಬಿಚ್ಚಿ, ಮುಂದೆ ಹೇಳುವ ಮಾತು ಬರೆದಿರುವ ಸ್ಥಳವನ್ನು ಕಂಡು ಓದಿದನು (ವಚನ 17ಬಿ, ಸಿ). ತಾನು ಅದನ್ನು ಬಿಚ್ಚಿ ಹಿಂದೆ ನಿಲ್ಲಿಸಿದ್ದ ಸ್ಥಾನದಿಂದ ಮುಂದಕ್ಕೆ ಬದಲಾಯಿಸಿಕೊಂಡನು. ಆ ದಿನಗಳ ಬರವಣಿಗೆಗಳು ಅಧ್ಯಾಯ ಹಾಗೂ ವಚನದ ಸಂಖ್ಯೆಗಳನ್ನು ಹೊಂದಿರಲಿಲ್ಲ. ಕ್ರಿಸ್ತನು ತನಗೆ ಮೆಚ್ಚಿಗೆಯಾಗಿರುವ ಭಾಗವನ್ನು ಹೇಗೆ ಆಯ್ಕೆಮಾಡಿದನು ಎಂದು ಗಮನಿಸಿ? ಯೆಶಾಯ 61:1, 2ರ ಭಾಗ ಆತನಿಗೆ ಅಚ್ಚು ಮೆಚ್ಚಿನದಾಗಿತ್ತು:

> ಕರ್ತನ ಆತ್ಮವು ನನ್ನ ಮೇಲೆ ಅದೆ, ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವದಕ್ಕೆ ಅಭಿಷೇಕಿಸಿದನು,[8] ಸೆರೆಯವರಿಗೆ ಬಿಡುಗಡೆಯಾಗುವದನ್ನು ಮತ್ತು ಕುರುಡರಿಗೆ ಕಣ್ಣು ಬರುವದನ್ನು ಪ್ರಸಿದಿದ ಪಡಿಸುವದಕ್ಕೂ ಮನಮುರಿದು ಬಿಡಿಸಿಕಳುಹಿಸುವದಕ್ಕೂ ಕರ್ತನು ನೇಮಿಸಿರುವ ಶುಭವರ್ಷವನ್ನು ಪ್ರಚಾರಪಡಿಸುವದಕ್ಕೂ ಆತನು ನನ್ನನ್ನು ಕಳುಹಿಸಿದ್ದನೆ ಎಂಬುದು (ವಚನಗಳು 18, 19).[9]

ಯೆಶಾಯನ ಈ ಗ್ರಂಥ ಭಾಗದಲ್ಲಿ ಮೆಸ್ಸೀಯನ ಕುರಿತ ವಿಚಾರ ಇರುವ ಬಗ್ಗೆ ನಿಖರತೆ ಇಲ್ಲದಿದ್ದರೂ, ಯಾವುದೇ ಭಿನ್ನಾಭಿಪ್ರಾಯವು ಇರುವದಿಲ್ಲ, ಈ ಭಾಗವು ಮೆಸ್ಸೀ ಯನ ಕುರಿತಾಗಿದೆ ಇದು ರಬ್ಬಿಗಳು ನಂಬಿದ್ದರು: ಮೆಸ್ಸೀಯನು ಬರುವಾಗ ಆತನ ಮೇಲೆ ಪವಿತ್ರಾತ್ಮನು ಇರುವನು. ಆತನು ಬಡವರಿಗೆ ಸುವಾರ್ತೆ ಸಾರುವನು. ಸೆರೆಯವರಿಗೆ ಬಿಡುಗಡೆ ತರುವನು. ಯುದ್ಧ ಕೈದಿಗಳಿಗೆ "ಸೆರೆಯವರು" ಎನ್ನುತ್ತಿದ್ದರು. ಆತನು ಕುರುಡರಿಗೆ ಕಣ್ಣುಗಳನ್ನು ನೀಡುವನು.

ಮೆಸ್ಸೀಯನ ಕೆಲಸ ಪಟ್ಟಿಯನ್ನು ಮಾಡುವದಾದರೆ, ಅಕ್ಷರಶದ ಸಂಗತಿಗಳನ್ನು ಗಮನಿಸಿ ಇಲ್ಲಿ ದಾಖಲಿಸಿರುವ ವಿಚಾರಗಳನ್ನು ಪ್ರಾಯೋಗಿಕವಾಗಿ ನೆರವೇರಿಸಿರುವನು. ನಂತರ ಅವುಗಳನ್ನು ಆತ್ಮೀಕ ದೃಷ್ಟಿಯಿಂದ ಗಮನಿಸಿರಿ. "ಸೆರೆಯವರನ್ನು ಬಿಡಿಸುವನು" ಅಂದರೆ ಸೈತಾನನ ದಾಸತ್ವದಲ್ಲಿರುವವರನ್ನು ಬಿಡಿಸುವನು ಎಂಬ ಅರ್ಥ. ಆದ್ದರಿಂದ ಯೇಸು ಕುರುಡರನ್ನು ಸ್ವಸ್ಥಮಾಡಿರುವಂತೆ, ಆತ್ಮೀಕ ಕುರುಡರನ್ನು ಬಿಡಿಸಿದ್ದಾನೆ.

ಮುಂದಿನ ಭಾಗವು ಆಸಕ್ತಿಕರವಾಗಿದೆ: ಜಜ್ಜಿ ಹೋದವರನ್ನು ಬಿಡುಗಡೆ ಮಾಡುವನು ಇದು ಯೆಶಾಯ 61:1, 2ರ ಬದಲು ಯೆಶಾಯ 58:6ರಲ್ಲಿದೆ. ಈ ವಿಚಾರಗಳನ್ನು ಓದಿದ ನಂತರ ಸುರುಳಿಯನ್ನು ಪುನ ಸುತ್ತಿ ಇಟ್ಟನು ಎಂದು ಅರ್ಥೈಸಿಕೊಳ್ಳಬೇಕು. 61ನೇ ಭಾಗವನ್ನು ಬಹಳ ನೆನಪಿದುವಷ್ಟು ಬಾರಿ ಯೇಸು ಈ ಸುರುಳಿಯನ್ನು ತೆರೆದು ಸುತ್ತಿಟ್ಟಿದ್ದನಲ್ಲವೇ.

ಯೆಶಾಯ 61ನೇ ಭಾಗವು ಒಂದು ವಾಗ್ದಾನದಿಂದ ಅಂತ್ಯಗೊಳುತ್ತದೆ: "ಕರ್ತನು ನೇಮಿ ಸಿರುವ ಶುಭವರ್ಷವನ್ನು ಪ್ರಚುರಪಡಿಸುವದಕ್ಕೂ" ಆತನು ನನ್ನನ್ನು ಕಳುಹಿಸಿದ್ದಾನೆ (ಲೂಕ 4:19). "ಶುಭವರ್ಷ" ಎಂದರೆ "ಕ್ಯಾಲೆಂಡರಿನ ಒಂದು ವರ್ಷ" ಎಂದಿರದೆ.

ಪ್ರತಿಯೊಂದನ್ನು ಸರಿಪಡಿಸುವ ಸಂದರ್ಭ ಎಂಬ ಅರ್ಥವಾಗಿದೆ: "ಶುಭ ವರ್ಷ" ಎಂದರೆ, ಹಳೆಒಡಂಬಡಿಕೆಯ "ಸಬ್ಬತ್ ವರುಷ"ವಾಗಿದೆ.[10] "ಏಳು ವರ್ಷಗಳು" ಯೆಹೂದ್ಯರಿಗೆ ಒಂದು ಪೂರ್ಣ ಸಂವತ್ಸರವಾಗಿತ್ತು. ಪ್ರತಿ ಏಳನೇ ವರುಷದಲ್ಲಿ ಭೂಮಿಯನ್ನು ಉಳಬಾರದಿತ್ತು - ಏಳು - ಏಳು ವರ್ಷಗಳ ಅಂದರೆ ನಲ್ವತ್ತೊಂಬತ್ತು ವರ್ಷಗಳ ನಂತರ ಬರುವ ಐವತ್ತನೇ ವರುಷವು ಜೂಬಿಲಿ ವರ್ಷವಾಗಿತ್ತು. ಆ ವರ್ಷದಲ್ಲಿ, ಸಾಲಗಳನ್ನು ಮನ್ನಮಾಡಬೇಕಿತ್ತು, ದಾಸರನ್ನು ಬಿಡುಗಡೆ ಮಾಡಬೇಕಿತ್ತು, ಹೊಲಗಳನ್ನು ಸಂಬಂಧಪಟ್ಟ ವಾರಸುದಾರರಿಗೆ ಹಿಂದಿರುಗಿಸಬೇಕಿತ್ತು. ಆ ಜೂಬಿಲಿ ವರ್ಷದಲ್ಲಿ ಜನರ ಸಕಲ ಕಾರ್ಯಗಳು ಘನರಾಂಭ ವಾಗುತ್ತಿತ್ತು. ಏಳು - ಏಳು ವರ್ಷಗಳು ಹಾಗೂ ಐವತ್ತನೇ ವರ್ಷದಲ್ಲಿ ನಡೆಯಬೇಕಿದ್ದ ಕಾರ್ಯಗಳು ಯೆಹೂದ್ಯರು ಎಷ್ಟು ಮಟ್ಟಿಗೆ ಪಾಲಿಸಿದರು ಎಂಬುದನ್ನು ನಾವು ಅರಿಯವು,

ಆದರೆ ಮೆಸ್ಸೀಯನು ಬಂದು "ಆ ವರ್ಷದ" ಸಂಗತಿಗಳನ್ನು ಪೂರ್ಣಮಾಡುವನು ಎಂಬ ಭರವಸೆಯಿಂದ ಆ ಜನರು ಇದ್ದರು.

"ಓದಿದ ಮೇಲೆ ಆತನು ಆ ಸುರುಳಿಯನ್ನು ಸುತ್ತಿ ಸಭಾ ಮಂದಿರದ ಆಳಿನ ಕೈಗೆ ಕೊಟ್ಟು ಕೂತುಕೊಂಡನು" (ವಚನ 20ಎ). ಇನ್ನೊಂದು ಪದದಲ್ಲಿ ಹೇಳುವದಾದರೆ, "ಸುರುಳಿಯನ್ನು ಸುತ್ತಿದನು" ಎಂಬ ಅರ್ಥ. ಅದನ್ನು ಆಳಿನ ಕೈಗೆ ನೀಡಿದನು. ನಂತರ ಕೂತುಕೊಂಡನು (ವಚನ 20ಬಿ) (ಪುರುಷರು ನಿಂತು ಓದಿದ ನಂತರ ಕೂತುಕೊಳ್ಳು ತ್ತಿದ್ದರು). ಕ್ರಿಸ್ತನು ಆ ಭಾಗವನ್ನು ವಿವರಿಸಲು ಸಿದ್ಧನಾದನು. "ಅಲ್ಲಿದ್ದವರೆಲ್ಲರ ಕಣ್ಣುಗಳು ಆತನ ಮೇಲೆಯೇ ಬಿದ್ದಿದವು" (ವಚನ 20ಸಿ). ಆ ವ್ಯಕ್ತಿಯ ಬಗ್ಗೆ ಆತನು ಓದಿದ ರೀತಿಯ ಬಗ್ಗೆ, ಅವರು ಆಸಕ್ತ ರಾದರು. ಅವರು ನಿಶಬ್ಧವಾಗಿ ಆತನನ್ನೇ ನೋಡುತ್ತಿದ್ದರು.

ಆತನು ಅವರಿಗೆ, "ಈ ಹೊತ್ತು ನೀವು ನನ್ನ ಮಾತನ್ನು ಕೇಳುವಲ್ಲಿ ಈ ವೇದೋಕ್ತಿ ನೆರವೇರಿದೆ" (ವಚನ 21). ಅದರ ಪರಿಣಾಮವಾಗಿ ಆತನು, ಹಿಂದೆ ಆದ ಅಥವಾ ಮುಂದೆ ಆಗಿಲಿರುವ ವಿಚಾರದ ಬಗ್ಗೆ ಹೇಳಲಿಲ್ಲ. ಯೆರೂಸಲೇಮಿನಲ್ಲಿ ಅಥವಾ ಬೇರೆ ಸ್ಥಳದಲ್ಲಿ ಆಗುವ ಸಂಗತಿಯೂ ಆಗಿರುವದಿಲ್ಲ. ಇದು *ಈಗಲೇ* ಇರುವ ಹಾಗೂ ನೆರವೇರುವ ಸಂಗತಿ. ನೀವು ಕೇಳುತ್ತಿರುವಾಗಲೇ ಆ ಸಂಗತಿಯು ನೆರವೇರಿದೆ. ಯೇಸು ನೆರವೇರಿಸುತ್ತಿದ್ದ ಕಾರ್ಯಗಳೇ ಪ್ರವಾದನಾ ನೆರವೇರಿಕೆಯಾಗಿತ್ತು - ಅಂದರೆ ಆತನೇ ಮೆಸ್ಸೀಯನಾಗಿದ್ದನು!

ಯಾವ ಜನರೊಂದಿಗೆ ಯೇಸು ಮೂವತ್ತು ವರ್ಷಗಳ ಕಾಲ ಬಳಕೆಯಲ್ಲಿದ್ದನೋ ಆ ಜನರು ಈಗ ಸಭಾಮಂದಿರದಲ್ಲಿ ಕೂಡಿಬಂದಿದ್ದರು. ಆತನು ಅವರೊಂದಿಗೆ ಬೆಳೆದಿದ್ದನು ಆತನು ಅವರನ್ನು ಪ್ರೀತಿಸಿದ್ದನು. ಆತನೇ ಮೆಸ್ಸೀಯನು ಎಂದು ಅವರು ಒಪ್ಪಿಕೊಳ್ಳುವ ಅವಕಾಶವು ಅವರಿಗೆ ದೊರೆತ್ತಿತ್ತು ಮತ್ತು ಯೆಶಾಯನು ತಿಳಿಸಿದಂತ ಆಶೀರ್ವಾದಗಳನ್ನು ಪಡೆಯುವ ಸಂದರ್ಭವಾಗಿತ್ತು.

ಅವರ ಪ್ರತಿಕ್ರಿಯೆ ಏನಾಗಿತು? ಮೊದಲಿಗೆ, "ಅವರೆಲ್ಲರು ಆತನ ಬಳಿ ಉತ್ತಮವಾಗಿ ಮಾತಾಡಿದರು, ಆತನ ಮಾತುಗಳ ಬಗ್ಗೆ ಆಶ್ಚರ್ಯಪಟ್ಟರು," ನಂತರ ಆತನ ಕುರಿತು, "ಇವನು ಯೋಸೇಫನ ಮಗನಲ್ಲವೇ?" ಎಂದರು (ವಚನ 22). ಆತನ ಬಗ್ಗೆ ಅವರು ಆಶ್ಚರ್ಯ ನಂತರ ಅವರು ಈತನ ಬಗ್ಗೆ ನಾವು ತಿಳಿದಿರುವೆವು; ಆತನು ನಿರ್ಮಿಸಿದ ಮರದ ಪೆಟ್ಟಿಗೆಗಳು ನಮ್ಮಲ್ಲಿವೆ! ಆತನು ಮಾಡಿದ ನೇಗಿಲು ನನ್ನ ಬಳಿಯಿದೆ! ಆತನು ಈ ದಿನ ಮಾಡಿದ ಕಾರ್ಯವು ಉತ್ತಮವಾಗಿದೆಯಲ್ಲವೇ! ಆತನು ಮಾತಾಡುವದನ್ನು ಎಲ್ಲಿ ಕಲಿತನು? ನಂತರ ಅವರಲ್ಲಿ ಸಂದೇಹ ಉಂಟಾಯಿತು. ಈ ಭಾಗದ ಕುರಿತು ಮತ್ತಾಯನು ಬರೆದು:

> ... ಅವರು ಕೇಳಿ ಅತ್ಯಾಶ್ಚರ್ಯಪಟ್ಟು - ಇವನಿಗೆ ಈ ಜ್ಞಾನವೂ ಈ ಮಹತ್ಕಾರ್ಯಗಳೂ ಎಲಿಲಂದ ಬಂದಿದ್ದಾವು?[11] ಇವನು ಆ ಬಡಗಿಯ ಮಗ ನಲ್ಲವೇ. ಇವನ ತಾಯಿ ಮರಿಯಳೆಂಬವಳಲ್ಲಲವೇ. ಯಾಕೋಬ ಯೋಸೇಫ ಸೀಮೋನ ಯೂದ ಇವರು ಇವನ ತಮ್ಮಂದಿರಲ್ಲವೇ. ಇವನ ತಂಗಿಯರೆಲ್ಲರು ನಮ್ಮಲ್ಲಿ ಇದ್ದಾರಲ್ಲವೇ. ಹಾಗಾದರೆ ಇವೆಲ್ಲಾ ಇವನಿಗೆ ಎಲ್ಲಿಂದ ಬಂದಿದ್ದಾವು? ಎಂದು ಮತಾಡಿಕೊಂಡು ಆತನ ವಿಷಯ ವಾಗಿ ಬೇಸರಗೊಂಡರು. ಆದರೆ ಯೇಸು ಅವರಿಗೆ-ಪ್ರವಾದಿಯು ಬೇರೆ ಎಲ್ಲಿದ್ದರೂ ಅವನಿಗೆ ಮರ್ಯಾದೆ ಉಂಟು; ಆದರೆ ಸ್ವದೇಶದಲ್ಲಿಯೂ ಸ್ವಂತ ಮೆಯಲ್ಲಿಯೂ ಮಾತ್ರ ಮರ್ಯಾದೆಯಿಲ್ಲ ಅಂದನು (ಮತ್ತಾಯ 13:54ಬಿ-57ಎ; ನೋಡಿ ಮಾರ್ಕ 6:3).

ಯೇಸುವಿನ ಜೀವನ ಕಾಲದಲ್ಲಿ ಇದ್ದ ಕಾರ್ಯಗಳ ಬಗ್ಗೆ ಅವರು ಯೋಚಿಸಿ, ಆತನು ನಿಜವಾಗಿಯೂ ಯಾರಾಗಿರಬಹುದೆಂದು ಅಚ್ಚರಿಪಟ್ಟರು. ಆತನು ಅವರ ಪಿತೋಪ ಕಾರಣಗಳನ್ನು ಸಿಧ್ಧಮಾಡಿದ್ದನು. ಆತನ ಮಾತುಗಳ ಬಗ್ಗೆ ಆಶ್ಚರ್ಯಪಟ್ಟರು. ಆದಾಗ್ಯೂ ಆತನು "ಅವರ ಊರಿನವನೇ ಆಗಿದ್ದನು." ಇದರಿಂದ ಅವರು ಬೇಸರಗೊಂಡರು. ಅದು

ಅವರ "ಅಪನಂಬಿಕೆ" ಎಂದು ಮತ್ತಾಯ ಹಾಗೂ ಮಾರ್ಕ ಇಬ್ಬರೂ ತಿಳಿಸಿರುವರು (ಮತ್ತಾಯ 13:58; ಮಾರ್ಕ 6:6). ಅವರ ಕರ್ತನನ್ನು ಹಿಂಬಾಲಿಸುವ ಅವಕಾಶವಿದ್ದರೂ, ನಂಬಲು ನಿರಾಕರಿಸಿದರು.

ಯೇಸು ಅವ ಹೇಳಿಕೆಗಳನ್ನು ಆಲಿಸಿರಬಹುದು. ಆತು ಅವ ಮನಸ್ಸನ್ನು ಅರಿತನು (ಯೋಹಾನ 2:25). ಆತನು ಅವರಿಗೆ, "ನೀನಂತು ವೈದ್ಯನೇ ನಿನ್ನನ್ನೇ ವಾಸಿಮಾಡಿಕೋ ಎಂಬ ಗಾದೆಯನ್ನು ನನಗೆ ಹೇಳಬಹದು" (ಲೂಕ 4:23ಎ). ಆ ಗಾದೆಯ ಅರ್ಥವೇನೆಂದರೆ, "ಇತರರ ಸಮಸ್ಯೆಯನ್ನು ಪರಿಹಾರ ಮಾಡುವ ಮೊದಲು ನಿನ್ನದನ್ನು ಪರಿಹರಿಸಿಕೋ" ಎಂಬ ಅರ್ಥವಾಗಿದೆ. ಅದನ್ನು ಸ್ವಲ್ಪ ಭಿನ್ನವಾಗಿ ಇಲ್ಲಿ ಹೇಳಲಾಗಿದೆ. ಯೇಸು ಅವರ ಅಂತರ್ಯದ ಬಗ್ಗೆ ಮುಂದುವರೆದು: ಕಪೆರ್ನೌಮಿನಲ್ಲಿ ಎಂಥೆಂಥಾ ಕಾರ್ಯಗಳು ನಡೆದವೆಂದು ಕೇಳಿದೆವೋ, ಅಂಥವುಗಳನ್ನು ಈ ನಿನ್ನ ಸ್ವಂತ ಸ್ಥಳದಲ್ಲಿ ಮಾಡು ಅನ್ನುವಿರಷ್ಟೆ (ವಚನ 23ಬ). ನೀನು ವೈದ್ಯನೆಂದು ನಿರೂಪಿಸುವ ಹಾಗೆ, ಕಪೆರ್ನೌಮಿನಲ್ಲಿ ಮಾಡಿದ ಮಹತ್ಕಾರ್ಯಗಳನ್ನು ಇಲ್ಲಿ ನೆರವೇರಿಸು ಎಂಬ ಅರ್ಥ.

ಯೇಸು ಕಪೆರ್ನೌಮಿನಲ್ಲಿ ಮಾಡಿದ ಮಹತ್ಕಾರ್ಯಗಳನ್ನು ಸಭಾಮಂದಿರದಲ್ಲಿದವರು ಅರಿತ್ತಿದ್ದರೂ, ಯಾಕಂದರೆ ಆ ಪಟ್ಟಣವು ಇಪ್ಪತ್ತು ಮೈಲುಗಳ ಅಂತರದಲ್ಲಿತ್ತು.[12] ಪ್ರಾಯಶಃ ಇತರೆ ಅದ್ಭುತಗಳ ಬಗ್ಗೆಯೂ ಅವರು ತಿಳಿದಿರಬಹುದು (ನೋಡಿ ಲೂಕ 7:17). ಯೇಸು ಆ ಪ್ರದೇಶದಲ್ಲಿ ಹಲವಾರು ಬಾರಿ ಪ್ರಯಾಣ ಮಾಡಿದ್ದರಿಂದ, ಕ್ರಿಸ್ತನ ಕುರಿತು ಅವರು ಅನೇಕ ಬಾರಿ ಆಲಿಸಿರಬಹುದು (ನೋಡಿ ಲೂಕ 8:1).[13] ಆದರೆ ಅವುಗಳು ಸಾಕಗಲಿಲ್ಲ. ಅವರು ಇನ್ನೊಂದು ಸೂಚನೆಗಾಗಿ ಹಾತೊರೆದರು ಅದು ಅವರಿಗೆ ವಿಶೇಷವಾಗಿರಬೇಕಿತ್ತು. ಅದು ನಂಬಿಕೆಯಾಗಿರದೇ ಅಪನಂಬಿಕೆಯ ಪ್ರತೀತವಾಗಿತ್ತು.

ಯೇಸು ಅವರಿಗೆ, ಆದರೆ "ಯಾವ ಪ್ರವಾದಿಯೂ ಸ್ವದೇಶದಲ್ಲಿ ಸಮ್ಮತವಲ್ಲ ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" ಅಂದನು (ಲೂಕ 4:24). ಮಾರ್ಕನ ಪ್ರಕಾರ, "ಪ್ರವಾದಿಯು ಬೇರೆ ಎಲ್ಲಿದ್ದರೂ ಅವನಿಗೆ ಮರ್ಯಾದೆ ಉಂಟು; ಆದರೆ ಸ್ವದೇಶದಲ್ಲಿಯೂ, ಸ್ವ ಜನರಲ್ಲಿಯೂ, ಸ್ವಂತ ಮನೆಯಲ್ಲಿಯೂ ಮರ್ಯಾದೆ ಇಲ್ಲ ಅಂದನು" (ಮಾರ್ಕ 6:4). ಈ ಹೇಳಿಕೆಯು ಯಾವಾಗಲೂ ಸತ್ಯವಾಗಿರದೆ, ಸಾಮಾನ್ಯವಾಗಿರುತ್ತದೆ. ಒಬ್ಬನನ್ನು ನಾವು ಬಹುವಾಗಿ ಅರಿತಿದ್ದರೆ, ಅವನು ಮಾಡಿರುವ ಸಾಧನೆಗಳನ್ನು ಅರಿಯುವದು ಕಷ್ಟಕರವಾಗಿ ರುತ್ತದೆ.

ಕ್ರಿಸ್ತನು ಮುಂದುವರೆಸಿ,

> ಕೇಳಿರಿ, ಎಲೀಯನ ಕಾಲದಲ್ಲಿ ಮೂರು ವರುಷ ಆರು ತಿಂಗಳು ಮಳೆಬಾರದೆ ದೇಶದಲ್ಲೆಲ್ಲಾ ದೊಡ್ಡ ಬರ ಉಂಟಾದಾಗ ಇಸ್ರಾಯೇಲ್ ಜನರಲ್ಲಿ ಎಷ್ಟೋ ಮಂದಿ ವಿಧವೆಯರು ಇದ್ದದ್ದು ನಿಜ; ಆದರೆ ಅವರಲ್ಲಿ ಒಬ್ಬರ ಬಳಿಗೂ ದೇವರು ಎಲೀಯನನ್ನು ಕಳುಹಿಸದೆ ಸೀದೋನ್ ದೇಶಕ್ಕೆ ಸೇರಿದ ಸರೆಪ್ತ ಊರಿನಲ್ಲಿದ್ದ ಒಬ್ಬ ವಿಧವೆಯ ಬಳಿಗೆ ಮಾತ್ರ ಕಳುಹಿಸಿದನು (ಲೂಕ 4:25, 26).

"ನಾನು ಪ್ರವಾದಿಯ ಆತ್ಮವನ್ನುಪಡೆದು ಬಂದಿದ್ದೇನೆ" ಎಂಬ ಅರ್ಥವಾಗಿತ್ತು, ಎಲಿಯನ ದಿವಸಗಳಲ್ಲಿ, ದೇವರು, ಹೊರಗಿನ ಪ್ರವಾದಿಗಳನ್ನು ಕಳುಹಿಸುತ್ತಿದ್ದನು. ಎಲಿಯನು ಯೆಹೂದ್ಯ ವಿಧವೆಗೆ ಸಹಾಯ ಮಾಡುವ ಬದಲು, ಚಾರೆಪ್ತದ[14] ವಿಧವೆಗೆ ಸಹಾಯ ಮಾಡಿದನು.

ಕ್ರಿಸ್ತನು ಮತ್ತೊಂದು ದೃಷ್ಟಾಂತವನ್ನು ನೀಡಿ: "ಮತ್ತು ಎಲೀಷನೆಯ ಪ್ರವಾದಿಯ ಕಾಲದಲ್ಲಿ ಇಸ್ರಾಯೇಲ್ ಜನರೊಳಗೆ ಎಷ್ಟೊ ಮಂದಿ ಕುಷ್ಟರೋಗಿಗಳು ಇದಾಗ್ಯೂ ಅವರಲ್ಲಿ ಒಬ್ಬನಾದರೂ ಶುದ್ಧವಾಗದೆ, ಸುರಿಯ ದೇಶದವನಾದ ನಾಮಾನನು ಮಾತ್ರ ಶುದ್ಧವಾದನು" (ವಚನ 27). ಎಲೀಷನು, ಎಲಿಯನ ಸೇವೆಯನ್ನು ಮುಂದುವರೆಸಿದನು. ಆದ್ದರಿಂದ

ಯೆಹೂದ್ಯರಲ್ಲಿದ್ದ ಅನೇಕ ಕುಷ್ಟರೋಗಿಗಳನ್ನು ಗುಣಪಡಿಸುವ ಬದಲು ದೇವರ ಸಹಾಯದಿಂದ ಅನ್ಯದೇಶದವರಲ್ಲಿ ಒಬ್ಬ ಕುಷ್ಟರೋಗಿಯನ್ನು ಸ್ವಸ್ಥಮಾಡಿದನು. ಯೇಸುವಿನ ದಿನದಲ್ಲಿ, ದೇವರು ಅನ್ಯರ ಬಗ್ಗೆ ಚಿಂತಿಸುತ್ತಾನೆ ಎಂದು ಹೇಳಿದರೆ ಯೆಹೂದ್ಯರು ಕೆರಳುತ್ತಿದ್ದರು!

ಕ್ರಿಸ್ತನ ಈ ನಿದರ್ಶನದಿಂದ ಜನರು ಹೇಗೆ ಪ್ರತಿಕ್ರಿಯಿಸಿದರು? "ಸಭಾ ಮಂದಿರದಲ್ಲಿ ಇದದವರೆಲ್ಲರೂ, ಈ ಸಂಗತಿಗಳನ್ನು ಕೇಳಿ *ನಂಬಿಕೆಯಿಂದ* ತುಂಬಿಸಲ್ಪಟ್ಟರು" ಎಂದು ಸತ್ಯವೇದವು ಹೇಳುತ್ತದೆಯೇ? ಆ ರೀತಿ ಹೇಳದೆ! "ಸಭಾ ಮಂದಿರದಲ್ಲಿರುವವರೆಲ್ಲರೂ ಬಹಳ *ಸಿಟ್ಟುಗೊಂಡರು* ಎಂದು ಹೇಳುತ್ತದೆ" (ವಚನ 28; ಒತ್ತಿ ಹೇಳಿದ್ದು ನನ್ನದು).

ಸಭಾಮಂದಿರದ ಸಾಮಾನ್ಯ ಕ್ರಮವನ್ನು ಬದಿಗಿಟ್ಟು ಅವರು, ಭ್ರಮೆ ತಪ್ಪಿದ ಜನರಂತಾದರು.[15] "ಆತನನ್ನು ಊರಹೊರಕ್ಕೆ ಅಟ್ಟಿ, ತಮ್ಮ ಊರು ಕಟ್ಟಿದ್ದ ಗುಡ್ಡದ ಕಡಿದಾದ ಸ್ಥಳಕ್ಕೆ ನಡಿಸಿಕೊಂಡು ಹೋಗಿ, ಅಲ್ಲಿಂದ ದೊಬ್ಬಬೇಕೆಂದಿದ್ದರು" (ವಚನ 29ಎ). ಲೆಬನೋನಿನ ಎತ್ತರ ಪ್ರದೇಶದಲ್ಲಿ ನಜರೇತು ಕಟ್ಟಲ್ಪಟ್ಟಿತ್ತು, ಅದು ಗಲಿಲಾಯದ ದಕ್ಷಿಣಕ್ಕಿದೆ. ಅವರು ತಮ್ಮ ದ್ವೇಷವನ್ನು ತೀರಿಸಿಕೊಳ್ಳಲು, ಬಹಳ ಕಡಿದಾದ ಸ್ಥಳಗಳು ಅಲ್ಲಿ ಲಭ್ಯವಿದ್ದವು.

"ಯೇಸುವನ್ನು ಅವರು ಅಲ್ಲಿಗೆ ನಡಿಸಿಕೊಂಡ ಹೋದರು" (ವಚನ 29ಬಿ). ಆತನು ತಾನೇ ಮೆಸ್ಸೀಯನು ಎಂದು ಹೇಳಿಕೊಂಡ ನಿಮಿತ್ತ ಜನರು - ಆತನು ದೇವದೂಷಣೆ ಮಾಡಿದನೆಂದು, ಹಾಗೂ ಈ ಪಾಪದ ನಿಮಿತ್ತ ಆತನನ್ನು ಕಲ್ಲೆಸದು ಕೊಲ್ಲಬೇಕೆಂದು ನಿರ್ಣಯಿಸಿದ್ದರು (ಯಾಜಕಕಾಂಡ 24:16). ಸಾಮಾನ್ಯವಾಗಿ ಕಲ್ಲುಗಳನ್ನು ಎಸೆದು ಅಪರಾದಿಗಳನ್ನು ಕೊಲ್ಲಲಾಗುತ್ತಿತ್ತು. ಕೆಲವು ಸಾರಿ ಅವನನ್ನು ಇಳಿಜಾರು ಪ್ರದೇಶದಲ್ಲಿ ತಳ್ಳಿ, ಅವನ ಮೇಲೆ ದೊಡ್ಡ ಕಲ್ಲುಗಳನ್ನು ಜಾರಿಸಲಾಗುತ್ತಿತ್ತು. ನಜರೇತಿನವರ ಮನಸ್ಸಿನಲ್ಲಿ ಇದೇ ಆಲೋಚನೆಯಿತ್ತು.

ಅವರ ಉದ್ದೇಶಗಳು ಏನೇ ಇರಲಿ, ವಚನ 30ರಲ್ಲಿ, "ಆದರೆ ಆತನು ಅವರ ಮಧ್ಯದಲ್ಲಿ ಹಾದು ಹೊರಟು ಹೋದನು" ಎಂದು ಬರೆದದೆ. ಆತನು ತನ್ನ ವ್ಯಕ್ತಿತ್ವವನ್ನು ಅಲ್ಲಿ ಮೆರದನೆ, ಆತನ ನೋಡುಗರು ಆತನನ್ನು ಕಂಡು ತಲ್ಲಣಗೊಂಡರೆ (ದೇವಾಲಯದಲ್ಲಿ ವ್ಯವಹಾರ ಮಾಡುವ ಜನರು ಆತನನ್ನು ಕಂಡಂತೆ) ಅಥವಾ ಆತನು ಅಲ್ಲಿ ಸೂಚಕಕಾರ್ಯವನ್ನು ಮಾಡಿದನೇ?[16] ನಾವು ಅವುಗಳನ್ನು ಅರಿಯದಾದರೂ, ಅಲ್ಲಿ ಆತನ "ಸಮಯವು" ಇನ್ನೂ ಬಂದಿರಲಿಲ್ಲ (ನೋಡಿ ಯೋಹಾನ 7:30; 8:20). ಅಗತ್ಯವಿದ್ದದ್ದನ್ನು ಆತನು ಮಾಡಿದನು. ಆದರೆ ಆತನು ಈಗ ನಜರೇತನನ್ನು ಬಿಟ್ಟು ಹೋದರು. ಅದು ಆತನ ಕಡೇಯ ಭೇಟಿ ಯಾಗಿತ್ತು.[17]

## ಯೇಸು ತಿರಸ್ಕಾರವನ್ನು ಹೇಗೆ ಅಂಗೀಕರಿಸಿದನು

ಎಂಥಹ ಒಂದ ದುಖದ ಕಥೆ: ಯೇಸು ತನ್ನ ಸ್ವಂತ ಊರಿನಲ್ಲೇ ತಿರಸ್ಕರಿಸಲ್ಪಟ್ಟನು! ಅದನ್ನು ಆತನು ಹೇಗೆ ಅಂಗೀಕರಿಸಿದನು ಎಂಬುದು ಸದ್ಯದ ಪ್ರಶ್ನೆಯಾಗಿದೆ. ತಿರಸ್ಕಾರ ಸಹಿಸುವ ಸಾಮರ್ಥ ಹೇಗೆ ಉಂಟಾಯಿತು? ನಮ್ಮ ಮಾರ್ಗದಲ್ಲಿ ಎದುರಾಗುವ ತಿರಸ್ಕಾರಗಳನ್ನು ನಾವುಗಳು ಹೇಗೆ ಎದುರಿಸಬಹುದು? ನಮ್ಮ ಪಾಠಕ್ಕೆ ಸಂಬಂಧಪಟ್ಟ ಏಳು ಅಂಶಗಳನ್ನು ಇಲ್ಲಿ ನೀಡಲಾಗದೆ:[18]

1. *ಅದನ್ನು ಆತನು ನಿರೀಕ್ಷಿಸಿದ್ದನು* (ನೋಡಿ ಮಾರ್ಕ 8:31; ಲೂಕ 17:25). ಅದು ಆತನ ಸೇವೆಯ ಒಂದು ಭಾಗವಾಗಿತ್ತು. ತಿರಸ್ಕಾರಕ್ಕೆ ಎದುರಾಗಿ ನಿಲ್ಲಬಾರದು. ನಿನ್ನ ಕೈಗಳನ್ನು ಹೊರಗೆ ಹಾಕಿದರೆ, ಅದು ಕತ್ತರಿಸಲ್ಪಡುತ್ತದೆ - ಆದರೆ ನೀನು ಏನನ್ನು ಮುಟ್ಟಲಾರೆ. ತಿರಸ್ಕಾರದ ನಿರೀಕ್ಷೆಯು ಯೇಸುವನ್ನು ಮಾನಸಿಕವಾಗಿ ಸಿದ್ಧಮಾಡಿತ್ತು.

2. *ಆತನು ದೇವರೊಂದಿಗಿನ ವಿಶೇಷ ಸಂಬಂಧದಲ್ಲಿದ್ದದರಿಂದ ತಿರಸ್ಕಾರವನ್ನು ಅನುಭವಿಸಲು ಸಾಧ್ಯವಾಯಿತು.* ಆ ಸಂಬಂಧದ ಕುರಿತು ಯೆಶಾಯನು ಪ್ರವಾದಿಸಿ: "ಕರ್ತನ

ಆತ್ಮವು ನನ್ನ ಮೇಲಿದೆ, ಆತನು ನನ್ನನ್ನು ಸುವಾರ್ತೆ ಸಾರಲು ಅಭಿಷೇಕಿಸಿರುವನು" (ಲೂಕ 4:18; ನೋಡಿ ಅಪೊಸ್ತಲರ ಕೃತ್ಯಗಳು 10:38). ದೀಕ್ಷಾಸ್ನಾನದ ಸಮಯದಲ್ಲಿ, ಆತ್ಮನು ಆತನ ಮೇಲೆ ಇಳಿದು ಬರುವ ಮೂಲಕ ಆ ಅಭಿಷೇಕವು ಉಂಟಾಯಿ (ಲೂಕ 3:22). ಆ ಕ್ಷಣದಿಂದ ಯೇಸು "ಯಾವಾಗಲು ಪವಿತ್ರಾತ್ಮ ಭರಿತನಾಗಿದ್ದನು" ಎಂದು ಲೂಕನು ತಿಳಿಸಿದ್ದಾನೆ (4:1; ನೋಡಿ ವಚನ 14). ಪ್ರಾರ್ಥನೆಯಮೂಲಕ ತನ್ನ ಸಂಬಂಧವನ್ನು ಭದ್ರಪಡಿಸಿಕೊಳ್ಳುತ್ತಿದ್ದನು (5:16; 6:12; 9:28; 11:1). ಅಂದಿನಿಂದ ಆತನು ಮನುಷ್ಯರಿಂದ ತಿರಸ್ಕರಿಸಲ್ಪಟ್ಟರೂ, ದೇವರಿಂದ ತಿರಸ್ಕರಿಸಲ್ಪಡಲಿಲ್ಲ (2 ತಿಮೋಥೆ 4:16, 17).

3. *ಸಭಾ ಮದಿರದ ಆರಾಧನೆಗೆ ಕ್ರಮವಾಗಿ ಹೋದದ್ದರಿಂದ, ಆತನು ತಿರಸ್ಕಾರ ಸಹಿಸಲು ಸಾಧ್ಯವಾಯಿತು.* ಸಭಾಮಂದಿರಕ್ಕೆ ಹೋಗುವದು ಆತನ ವಾಡಿಕೆಯಾಗಿತ್ತು ಎಂದು ಈಗಾಗಲೇ ಕಲಿತ್ತಿದ್ದೇವೆ. ನನಗೆ ಆರಾಧನೆಯ ಅಗತ್ಯವಿಲ್ಲವೆಂದು ಹೇಳುವದಾದರೆ, ಯೇಸುವಿಗೆ ಅದರ ಅಗತ್ಯವಿರಲಿಲ್ಲ. ಅದಾಗ್ಯೂ ದೇವಜನರು ಒಟ್ಟಾಗಿಸೇರಿ ಆರಾಧನೆ ಹಾಗೂ ದೇವಧ್ಯಾನವನ್ನು ಮಾಡುವಾಗ, ಆತನು ಅಲ್ಲಿರಲು ಬಯಸಿದನು.

ಈ ಕ್ರಿಸ್ತನ ಜೀವನ ಚರಿತ್ರೆಯ ಪಾಠದಲ್ಲಿ ನಾವುಗಳು ನಿಮಗೆ, ಆ ದಿನಗಳಲ್ಲಿ ದೇವ ಜನರ ಕುರಿತ ಕೆಲವು ಪ್ರಶ್ನೆಗಳನ್ನು ನಿಮ್ಮ ಮುಂದೆ ಇಟ್ಟಿದ್ದೇವೆ: ಇಸ್ರಾಯೇಲ್ಯರು ನಿಜವಾಗಲೂ ದೇವ ಭಕ್ತರಾಗಿದ್ದರೆ? ಐಖ್ಯತೆಯ ಜನರಾಗಿದ್ದರೆ? ಅವರು ದೇವರ ಮೇಲೆ ಪ್ರೀತಿ ಮತ್ತು ನಂಬಿಕೆಯನ್ನು ಇಟ್ಟಿದ್ದರೆ? ಅಥವಾ ಆತ್ಮೀಕವಾಗಿ ಹಿನ್ನಡೆ ಹೊಂದಿದ್ದರೆ? ಯೇಸು ಅವರ ಕುರಿತು "ಸಭಾಮಂದಿರದಲ್ಲಿರುವವರು ಕಪಟಿಗಳಾಗಿರುವದರಿಂದ" ನಾನು ಅಲ್ಲಿಗೆ ಹೋಗುವದಿಲ್ಲ, ಅಥವಾ ಅವರಿಗಿಂತ ನಾನು ಉತ್ತಮನಾಗಿರುವದರಿಂದ ಹೋಗಲಾರೆ ಎಂದು ಹೇಳಬಹುದಿತ್ತು. ಆದರೆ ಆತನು ಆ ರೀತಿ ಮಾಡಲಿಲ್ಲ. ಆರಾಧಿಸುವವರು ದೇವರೊಂದಿಗೆ ಪರಿಪೂರ್ಣ ಸಂಬಂಧ ಹೊಂದಿದ್ದರೆಂದು ತಿಳಿದು ಯೇಸು ಸಭಾಮಂದಿರಕ್ಕೆ ಹೋಗದೆ; ದೇವರೊಂದಿಗಿನ ತನ್ನ ಸಂಬಂಧವನ್ನು ಭದ್ರಪಡಿಸಿಕೊಳ್ಳುವದಕ್ಕೆ ಹೋದನು.

ಈ ದಿನಗಳಲ್ಲಿ ನಾವು ಸಭಾಮಂದಿರಗಳಿಗೆ ಹೋಗದೆ, ಆರಾಧನೆಗಾಗಿ ಸಭೆಗೆ ಹೋಗುತ್ತೇವೆ. ಹೌದು ನಾವುಗಳು ಕರ್ತನ ಮನೋಭಾವನೆಯನ್ನೇ ಹೊಂದಿಕೊಳ್ಳಬೇಕು (1 ಪೇತ್ರ 2:21). ಪರಸ್ಪರ ಉತ್ತೇಜನಕ್ಕಾಗಿ, ನಾವುಗಳು ಕ್ರಮವಾಗಿ ಸೇರಿ ಬರಬೇಕು (ಇಬ್ರಿಯ 10:24, 25). ನಾವು ಲೋಕದವರಿಂದ ತಿರಸ್ಕರಿಸಲ್ಪಡುವಾಗ, ಸಭೆಯ ಸಹೋದರ, ಸಹೋದರಿಯಿಂದ ಬಲಹೊಂದುತ್ತೇವೆ.

4. *ಆತನು ಗ್ರಂಥಗಳನ್ನು ಅರಿತ್ತಿದ್ದರಿಂದ ತಿರಸ್ಕಾರವನ್ನು ಎದುರಿಸಿದನು.* ತಾನು ಓದಬೇಕಾಗಿದ್ದ ಗ್ರಂಥಭಾಗವನ್ನು ಆತನು ತೆರೆಯುತ್ತಿದ್ದ ಚಿತ್ರಣವನ್ನು ಮತ್ತೊಂದು ಸಾರಿ ಊಹಿಸಿಕೊಳ್ಳಿರಿ. ಈ ಸಲಹೆಗಳನ್ನು ನಮ್ಮನ್ನು ಎಲ್ಲಿಗೆ ನಡೆಸುತ್ತಿವೆ ಎಂದು ಗ್ರಹಿಸಿದ್ದೀರಾ? ನಮ್ಮನ್ನು ಬಲಪಡಿಸುವದಕ್ಕಾಗಿ ದೇವರು ಅನೇಕ ಸಂಪನ್ಮೂಲಗಳನ್ನು ನೀಡಿರುವನು. ಪ್ರಾರ್ಥನೆ ಮತ್ತು ದೇವರೊಂದಗಿನ ಅನ್ಯೋನ್ಯತೆಯ ಸಂಬಂಧವನ್ನು ನೀಡಿರುವನು. ಆತನ ಸ್ವರವನ್ನು ಕೇಳುವಂಥ ಸತ್ಯವೇದವನ್ನು ನಮಗೆ ನೀಡಿದ್ದಾನೆ. ಪರಸ್ಪರ ಸಂದಿಸಿ, ಉತ್ತೇಜನ ಪಡೆಯುವ ಅವಕಾಶವನ್ನು ನೀಡಿರುವನು. ಆದರೆ ನಮ್ಮಲ್ಲಿ ಅನೇಕರು ದೇವರು ನಮಗೆ ಅನುಗ್ರಹಿಸಿರುವ ಈ ಶ್ರೇಷ್ಟ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುತ್ತಿರುವದಿಲ್ಲ. ತಿರಸ್ಕೃತ ಉಂಟಾಗುವಾಗ ನಾವು ಏಕೆ ಕುಗ್ಗಿ ಹೋಗುತ್ತೇವೆ ಎಂದು ಆಗ ಗ್ರಹಿಸಿಕೊಳ್ಳುತ್ತೇವೆ.

5. *ಆತನು ಯಾರು ಹಾಗೂ ದೇವರಲ್ಲಿ ಯಾವ ಸ್ಥಾನವನ್ನು ಹೊಂದಿದ್ದನು ಎಂಬ ಸಂಗತಿಯನ್ನು ತಿಳಿದಿದ್ದರಿಂದ ತಿರಸ್ಕಾರ ಸಹಿಸಿಕೊಂಡನು.* ಆತನು ಯೆಶಾಯ 61ನ್ನು ಓದು, "ಯೆಶಾಯನು ನನ್ನ ಬಗ್ಗೆ ಮಾತಾಡಿದ್ದಾನೆ." ದೇವರ ಬಯಕೆಯನ್ನೇ ನಾನು ಮಾಡುತ್ತಿದ್ದೇನೆ ಎಂದು ತಿಳಿಸಿದನು. ನಾವುಗಳು ಸದೃಡರಾಗಿರದೆ, ಇರುವದರಿಂದ, ಅನೇಕಸಾರಿ ತಿರಸ್ಕಾರವನ್ನು ಸಹಿಸಿಕೊಳ್ಳಲು ಆಗುವದಿಲ್ಲ, ದೇವರ ಯೋಜನೆಯಲ್ಲಿ ಹಾಗೂ ದೇವರಲ್ಲಿ

ನಮ್ಮ ಇರುವಿಕೆಯನ್ನು ಅರಿತಿರುವದಿಲ್ಲ. ಕ್ರೈಸ್ತರಗಿರುವವನು, ನೀನು ದೇವರ ಮನುಷ್ಯನು ಅಥವಾ ದೇವರ ಮಗಳು ಆಗಿರುವಿರಿ, ಆಗ ದೇವರು ನಿಮಗಾಗಿ ತನ್ನ ಯೋಜನೆಯನ್ನು ಇಟ್ಟಿರುವನು, ಸತ್ಯವನ್ನು ಭದ್ರವಾಗಿ ಹಿಡುಕೊಳ್ಳಿರಿ.

6. *ತಿರಸ್ಕಾರ ಹೊಂದುವೆನೆಂದು ತಿಳಿದೂ ಸಹ ಆತನು ಸರಿಯಾದ ಕಾರ್ಯಗಳನ್ನು ಮಾಡಿದ್ದರಿಂದ ತಿರಸ್ಕಾರ ಸಹಿಸಿದನು.* ನಜರೇತಿನವರಿಗೆ ತಾನು ಹೇಳಬೇಕಾದ ಸಂಗತಿಗಳನ್ನು ಹೇಳಿದರೆ, ಅವರು ತಿರಸಲ್ಕರಿಸುವರು ಎಂಬ ಅಂಶವನ್ನು ತಿಳಿದಿದ್ದರೂ, ಆತನು ಅದನ್ನು ಅವರಿಗೆ ಹೇಳಿದನು. ನಾವು ತಿರಸ್ಕರಿಸಲ್ಪಟ್ಟಾಗ, ನಾವು ದೇವರ ಚಿತ್ರದ ಮೇರೆಗೆ ತಿರಸ್ಕರಿಸಲ್ಪಟ್ಟಿದ್ದೇವೆ ಎಂದು ತಿಳಿದು ಸಮಾಧಾನದಿಂದ ಇರೋಣ.

7. *ತಾನು ಮಾಡಬೇಕಾದ ತಿರಸ್ಕಾರದ ಕುರಿತಾಗ ನಾನು ಈಪಾಠದಲ್ಲಿ ಒತ್ತಿ ಹೇಳಿದೇನೆ, ನಿರಾಶೆಗೊಳ್ಳದೆ ಅದನು ಎದುರಿಸಿದನು.* ಅಪನಂಬಿಗಸ್ತರಾದ ಅನೇಕ ಕ್ರೈಸ್ತರು ಇದರಿಂದ ಲಾಭವನ್ನು ಪಡೆಯು ಬಹುದಾಗಿದೆ.

ಪ್ರಪಂಚದಿಂದ ಹೊಂದವ ತಿರಸ್ಕಾರದ ಕುರಿತಾಗ ನಾನು ಈಪಾಠದಲ್ಲಿ ಒತ್ತಿ ಹೇಳಿದೇನೆ ನಮ್ಮ ಈ ಪಾಠದಲ್ಲಿ ಯೇಸು ಲೋಕದಿಂದ ತಿರಸ್ಕಾರ ಹೂಂದಲಿಲ್ಲ, ಆದರೆ ದೇವರ ಜನರೆನಿಸಿಕೊಂಡವರಿಂದ ತಿರಸ್ಕಾರ ಹೊಂದಿದನು. ಆತನ ಸಂತೆಯ ಸ್ಥಳದಲ್ಲಿ ತಿರಸ್ಕಾರ ಹೊಂದದೆ ಆರಾಧನೆ ನಡೆಯುವ ದೇವಾಲಯದಲ್ಲಿ ತಿರಸ್ಕೃತನಾದನು.

ಒಂದು ಕಾಲದಲ್ಲಿ ಆರಾಧನೆಯಲ್ಲಿ ಹಾಗೂ ದೇವರ ಕಾರ್ಯದಲ್ಲಿ ಆಸಕ್ತರಾಗಿದ್ದ ಕೆಲವು ದೇವ ಜನರಬಗ್ಗೆ ನಾನು ಅರಿತಿರುವೆನು, ಇತರ ಕ್ರೈಸ್ತರು ನಿಮಿತ್ತವಾಗಿ ಅವರು "ಬೇಸರ ಪಟ್ಟು" ಸಭೆಯನ್ನು ಬಿಟ್ಟು ಹೋಗಿದ್ದಾರೆ. ಕರ್ತನು ಸಭೆಯಲಿಲ್ಲ ಇನ್ನೆಂದಿಗೂ ಪಾಲುದಾರರಾಗುವದಿಲ್ಲ ಎಂಬ ಶಪಥವನ್ನು ಅವರು ಮಾಡಿದ್ದಾರೆ.

ಆತನು ಜನರಿಂದ ತಿರಸ್ಕಾರ ಮಾತ್ರ ಹೊಂದರೆ, ಅವರು ಆತನನ್ನು ಕೊಲ್ಲಲು ಸಹ ಪ್ರಯತ್ನಿಸಿದರು. ನಾನ ಭೇಟಿ ಮಾಡಿದ ಅಪನಂಬಿಗಸ್ಥರಾದ ಅನೇಕರು, ಎಂದಿಗೂ ದೇವ ಜನರಿಂದ ಗೊಂದಲಕ್ಕೆ ಒಳಗಾಗಿರುವುದಿಲ್ಲ. ಈ ಕಾರಣದಿಂದ ಆತನು ಸಾರ್ವಜನಿಕ ಆರಾಧನೆಯಲಿಲ್ಲ. ಭಾಗಿಯಾಗಲಿಲ್ಲವೇ? ಸಭಾಮಂದಿರದಲ್ಲಿ ಎನ್ನೆಂದಿಗೂ ಪಾಲುದಾರನಾಗುವದಿಲ್ಲ ಎಂದು ಹೇಳಿದನು? ಅವರಿಗೆ ನನ್ನ ಅಗತ್ಯವಿಲ್ಲದಿದ್ದರೆ, ನಾನು ಅವರ ನಡುವೆ ಇರುವುದಿಲ್ಲ ಎಂದು ಹೇಳಿದನು? ಮುಂದಿನ ಕಥೆಯಲ್ಲಿ, ಯೇಸು ಕಪೆರ್ನೌಮಿನ ಸಭಾ ಮಂದಿರಕ್ಕೆ ಹೋದ ವಿಚಾರವನ್ನು ನೋಡುತೇವೆ (4:31, 33).[19] ಆತನು ಸಭಾಮಂದಿರದ ಅರಾದನೇಯಲ್ಲಿ ನಿರಾಕರಣೆಗುಂದಾಗ, ಅತನು ಮತ್ತೊಂದು ಅರಾಧನೆಗೆ ಹೋದನು, ಸರಿಯಾದ ಕಾರ್ಯವನ್ನು ಮಾಡಲು ನಿರಾಕರಣೆಯ ನಮ್ಮ ಬಲಹೀನತೆಯಾಗಬಾರದು.

ತಿರಸ್ಕಾರದ ನಿಮಿತೆ, ನಿದ್ರೆ ಇಲ್ಲದ ಅನೇಕ ರಾತ್ರಿಗಳು ಉಂಟಾದರೂ, ನೀವು ಮಾಡಬೇಕಾದ ಕಾರ್ಯವನ್ನು ಮಾಡದಂತೆ ತಿರಸ್ಕಾರಥ ಅಡ್ಡ ಮಾಡದೆ ಇರಲಿ. ಸಮರ್ಪಣೆಯ ಜೀವಿತದ ಮುಖಾಂತರ, ತಿರಸ್ಕಾರವನ್ನು ಎದುರಿಸಿರಿ. ನನ್ನೊಂದಿಗೆ ಪ್ರಾರ್ಥಿಸುವಿರಾ:

> ಪರಲೋಕದಲ್ಲಿರುವ ನಮ್ಮ ತಂದೆಯೇ,ನಮ್ಮ ನಾಶಪಡಿಸುವುದಕ್ಕೂ, ಸಹೂದರ, ಸಹೊದರಿ - ಯರನ್ನು ನಿರಾಶೆಗೊಳಿಸುವದಕ್ಕೂ, ಶ್ರೆತಾನನು ಪ್ರಯಿತ್ನಿಸುತಿರುವನು ನಿನ್ನ ಮಾರ್ಗದಿಂದ ದೂರಮಾಡಲು ಯತ್ನಿಸುತಿರುವನು. ಶ್ರೆತಾನನು ಅಥೆದ ಮನಸ್ಸನ್ನು ನಮಗೆ ತಾರದಂತೆ ನಮ್ಮ ಹೃದಯಗಳನ್ನು ಧೃಡಪಡಿಸು. ನಿನ್ನನ್ನು ಪ್ರೀತಿಸು, ನಿನ್ನ ಸಂಗತಿಗಳನ್ನು ಮಾಡದಂತೆ ನಮಗೆ ಸಹಾಯಿಸು, ತಿರಸ್ಕಾರವನ್ನು ಸಹಿಸಿಕೊಳ್ಳ ವಂತೆ, ಅವನು ನಮ್ಮನ ಕಾಪಾಡು, ಅಮೆನ್.

## ಮುಕ್ತಾಯ

ತಿರಸ್ಕಾರವನ್ನು ಜಯಿಸಲು, ನೀವು ಕರ್ತನೊಂದಿಗೆ ಉತ್ತಮವಾದ ಬಾಂದವ್ಯವನ್ನು ಹೊಂದಿರಬೇಕು. ದೀಕ್ಷಾಸ್ನಾನದಿಂದ ಅನ್ಯೋನ್ಯತೆಯು ಆರಂಭವಾಗುತ್ತದೆ, ಯೇಸುವಿನ ದೀಕ್ಷಾಸ್ನಾನದಲ್ಲಿ ಪವಿತ್ರಾತ್ಮನು ಅತನ ಮೇಲೆ ಇಳಿದು ಬರಲು, ದೇವರು ಅತನು ತನ್ನ ಮಗನೆಂದು ಸಾಕ್ಷಿನೀಡಿದನು (ಮತ್ತಾಯ 3;6, 7). ನೀವು ದೀಕ್ಷಾಸ್ನಾನ ಹೊಂದುವಾಗ ದೇವರು ನಿಮ್ಮ ಹೃದಯಗಳಲ್ಲಿ ಪವಿತ್ರಾತ್ಮನನ್ನು ನೀಡಿ, ನಿಮ್ಮನ್ನು ತನ್ನ ಮಕ್ಕಳೆಂದು ಒಪ್ಪಿಕೊಳ್ಳುವನು (ಅಪೊಸ್ತಲರ ಕೃತ್ಯಗಳು 2:38; ಗಲಾತ್ಯ 4:16, 17).[20] ದೀಕ್ಷಾಸ್ನಾನ ಹೊಂದಿದ ನಂತರ, ನಂಬಿಗಸ್ಥಿಕೆಯಲ್ಲಿ ಮುಂದುವರೆಯಬೇಕು, ಇದರಿಂದ ಬಲಹೊಂದಿ, ತಿರಸ್ಕಾರವನ್ನು ಸಹಿಸಿಕೊಳ್ಳಬಹುದು.

ನಂಬಿಕೆ ಮತ್ತು ವಿಧೇಯತೆಯಿಂದ ನೀನು ದೇವರ ಮಗುವಾಗಿರುವೆಯಾ? ನೀನು ದೇವರ ಮಗುವಾದ ನಂತರ, ತಿರಸ್ಕಾರದ ನಿಮಿತ್ತ ಬೇಸರಗೊಂಡು, ಫಲಪ್ರದವಾಗಿರುವದಿಲ್ಲವೇ? "ಇದಲ್ಲದ ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ, ಆತ್ಮ ದೇಹ ಎರಡನ್ನೂ ಕೂಡ ನರಕದಲ್ಲಿ ಹಾಕಿ ನಾಶಮಾಡಬಲ್ಲಾತನಿಗೆ ಹೆದರಿರಿ" (ಮತ್ತಾಯ 10:28). ಕ್ರಿಸ್ತನ ಆಲೋಚನೆಯನ್ನು ಒಪ್ಪುವದಾದರೆ: "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ. ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ" (ಗಲಾತ್ಯ 3:26, 27). "ಮೊದಲ ಪ್ರೀತಿಗೆ ಹಿಂದಿರುಗು" (ಪ್ರಕಟಣೆ 2:4). ಕ್ಷಣಕಾಲವಾದರು - ವಿಧೇಯತೆಯನ್ನು ಕಳಕೊಳ್ಳದಿರು.

---

ಟಿಪ್ಪಣಿಗಳು

[1]ಯೆರೆಮೀಯ 20:7, 8, ಐದು ದೂರುಗಳು. [2]ನಿಮ್ಮ ಸ್ವಂತ ನಿರಾಕರಣೆಯನ್ನು ನಿದರ್ಶನವಾಗಿ ಹೇಳಿ. [3]ಮಾರ್ಕ ಮತ್ತು ಮತ್ತಾಯ ಈ ವಿಚಾರದಲ್ಲಿ, "ಭಿನ್ನವಾಗಿದ್ದರೂ" ಆದರೆ ಒಂದೇ ವಿಚಾರವಾಗಿದೆ. [4]ನಜರೇತಿನ ಕುರಿತ "ಕ್ರಿಸ್ತನು ಬರುತ್ತಾನೆ" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕದಲ್ಲಿ ನೋಡಿ. [5]ಇಬ್ರಿಯ ಭಾಷೆಯ *ಶೇಮ* ಅಂದರೆ "ಕೇಳು" ಎಂದಥ ಧರ್ಮೋಪದೇಶಕಾಂಡ 6:4. ಸಂಕುಚಿತ ಭಾವದಲ್ಲಿ ದೈನಂದಿನ ಪ್ರಾರ್ಥನೆಗಳಲ್ಲಿ ಶೇಮವು ಧರ್ಮೋಪದೇಶಕಾಂಡ 6:4-9 ಮತ್ತು 11:13-21, ಅರಣ್ಯಕಾಂಡ 15:37-41, ವಿವಿಧ ಅಂತ್ಯೋಕ್ತಿಗಳಲ್ಲಿ ಸೂಚಿಸಲಾಗಿದೆ. [6]*The Answer* (Dallas: Word Bibles, 1993), 1033. "ಕೆಲಸಗಾರ," "ಸೇವಕ," ಮತ್ತು "ಸಹಾಯಕ" ಎಂಬುದಕ್ಕೆ ಗ್ರೀಕ್‌ನಲ್ಲಿರುವ ಅಕ್ಷಾರಾಂಶವು "ಕೆಳಗಿನ" ಎಂದರ್ಥ. ದೊಡ್ಡ ಹಡಗುಗಳಲ್ಲಿ ಸೇವೆ ಸಲ್ಲಿಸುವವರ ಬಗ್ಗೆ ಇದು ಸೂಚಿಸುತ್ತದೆ. ಇದು ಕಷ್ಟದಾದ ಕೆಲಸವನ್ನು ಮತ್ತು ಯಾರೂ ಹೊಗಳಲಾರದ ಕೆಲಸವನ್ನು ಸೂಚಿಸುತ್ತದೆ. [7]ಈ ಮನುಷ್ಯನು "ಸಭಾಮಂದಿರದ ಅಧಿಕಾರಿಯಲ್ಲ" (ಲೂಕ 8:41; KJV) ಬೇರೆ ವಿಧದ ಸ್ಥಾನ. [8]KJV ಪ್ರಕಾರ, ಮುರಿದ ಹೃದಯವನ್ನು ಮೆಸ್ಸೀಯನು ಸ್ವಸ್ಥಮಾಡಿದನು, ಲೂಕನ ಹಳಿಕೆಯನ್ನು ಊರ್ಜಿತ ಮಾಡಲು ಬಳಸಲಾಗಿದೆ. ಯೆಶಾಯ 61:1 ಮೂಲ ಗ್ರಂಥಗಳಲ್ಲಿ ಇಲ್ಲದೆ ಹೋದರೂ ಈ ಕಾರ್ಯವನ್ನು ಮೆಸ್ಸೀಯನು ಮಾಡಬೇಕಿತು. [9]ಬಡವರ, ಸರೆಯವರ, ಕುರುಡರ, ಜಜ್ಜಿಹೋದವರನ್ನು ಮೆಸ್ಸೀಯನ್ನು ಆದರಿಸಿದ್ದನು. [10]ಮೂಲ ಪಾಠಕ್ಕಾಗಿ ಯಾಜಕಕಾಂಡ 25 ಮತ್ತು 27ನ್ನು ನೋಡಿರಿ.

[11]ಈತನು "ಬಡಗಿಯಲ್ಲವೇ" ಎಂದರು? (ಮಾರ್ಕ 6:3). ಆತನ ತಂದೆ ಮಾತ್ರ ಬಡಗಿಯಾಗಿರದ ಯೇಸು ಸಹ ಬಡಗಿಯಾಗಿದ್ದನು. [12]ನಜರೇತು, ಕಪೆರ್ನೌಮಿನ ಉತ್ತರ ದಿಕ್ಕಿನಲ್ಲಿತ್ತು, "ಯೇಸುವಿನ ಕಾಲದ ಭೂಪಟ ನೋಡಿರಿ." [13]ಲೂಕ 4, 7 ಮತ್ತು 8ನ್ನು ಸಾಮರಸದಲ್ಲಿ ನೀಡಲಾಗಿದೆ. [14]ದೇವರು ಅನ್ಯರ ಮೇಲೆ ಇಟ್ಟಿರುವ ಚಿಂತನೆಯನ್ನು ಯೇಸು ತಿಳಿಸಿರುವನು, ಮೆಸ್ಸೀಯನು ಯೆಹೂದ್ಯರಿಗಾಗಿ ಹಾಗೂ ಅನ್ಯರಿಗಾಗಿಯೂ ಬಂದಿದನು. [15]ಹಿರಿ ಸಭೆಯವರು ಸ್ತೆಫನನ ಬಳಿಗೆ ಹೋದದ್ದನ್ನು ಹೋಲಿಸಿರಿ (ಅಪೊಸ್ತಲರ ಕೃತ್ಯಗಳು 7:54, 57-59ಎ). [16]ಸೂಚಕ ಕಾರ್ಯ ನಡೆಸಿದ್ದರೆ, ಅವರು ತಮ್ಮ ಕೋರಿಕೆಯನ್ನು ಪಡೆಯುತ್ತಿದ್ದರೆ ಹೊರತು ತಮಗೆ ಅಗತ್ಯವಾದದ್ದನ್ನು ಪಡೆಯುತ್ತಿರಲಿಲ್ಲ.

[17]ಅವರು ಆತನನ್ನು ನಿರಾಕರಿಸಿದರು, ಈ ಆತನು ಅವರನ್ನು ನಿರಾಕರಿಸಿದನು. [18]ನನ್ನ ಚರ್ಚೆಯೇ ಅಂತ್ಯವಾಗದಿರಲಿ. ನಿಮ್ಮ ಚರ್ಚೆಗಳನ್ನು ತರ್ಕಮಾಡಿರಿ. [19]ಲೂಕ 4:31ನ್ನು ಸಾರಸಮ್ಯದಲ್ಲಿ ಸೇರಿಸಿದ್ದೇವೆ. [20]ನಮ್ಮ ಹಾಗೂ ಯೇಸುವಿನ ದೀಕ್ಷಾಸ್ನಾನದಲ್ಲಿ ಪಡೆಯುವ ದೇವರ ಆತ್ಮನ ವಿಚಾರದಲ್ಲಿ ವಿವಿಧ ಅರ್ಥಗಳಿವೆ, ಮಹತ್ಕಾರ್ಯಗಳನ್ನು ನಡೆಸಲು ಆತನು ಪಡೆದರೆ, ಅದರಲ್ಲಿ ಹೇಗೂ ಹೋಲಿಕೆಗಳಿವೆ.